# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಎಮ್.ವಿ.ಸಿ. ನಂಃ 1831/2023**
**ಪಿ .ಡಬ್ಲ್ಯೂಃ1,**

**ದಿನಾಂಕ : 19-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ವಕೀಲರಿಂದ**

ದಿ.30-06-2022 ರಂದು ಹೈದ್ರಾಬಾದ್ ಯಾದಗಿರಿ ಹೈವೆಯಲ್ಲಿ ರಾಜಸ್ಥಾನ ಡಾವಾ ಹತ್ತಿರ ರಾತ್ರಿ 03-00 ಗಂಟೆಗೆ ಅಪಘಾತ ಆಗಿದೆ. ನಾನು Swift desire ಕಾರು ನಂ.ಟಿ ಎಸ್ 12 ಇ ಕ್ಯೂ 4058 ದಲಿ ಹೋಗುವಾಗ ಅಪಘಾತ ಆಗಿದೆ. ಕಾರಿನಲ್ಲಿ ನಾನು, ಅಮೀರ್ ಖಾನ್, ಮೊಹಮ್ಮದ್ ಜಾವಿದ್ ಇದ್ದೆವು. ಕಾರನ್ನು ಮೊಹಮ್ಮದ್ ಜಾವಿದ್ ಚಲಾಯಿಸುತ್ತಿದ್ದನು. ಕಾರು ಮೊಹಮ್ಮದ್ ಜಾವಿದ್ ಮಾಲೀಕ. ಕಾರಿನ ಆರ್ ಸಿ ಮತ್ತು ಲೈಸೆನ್ಸ ಸಲ್ಲಿಸಿಲ್ಲ. ಅಪಘಾತವು ಲಾರಿ ಕೆ ಎ 16 ಸಿ 5024 ಮುಂದಿನಿಂದ ಬಂದು ಮುಖಾ ಮುಖ್ ಡಿಕ್ಕಿಯಾಯಿತು. ಕಾರಿನಲ್ಲಿದ್ದ ಮೂರು ಜನರಿಗೆ ಗಾಯಗಳು ಆಗಿವೆ. ಅಪಘಾತ ಆದ ನಂತರ ಸರ್ಕಾರಿ ಆಸ್ಪತ್ರೆಗೆ ದಾಖಲಾದೆವು ನಂತರ ಅಲ್ಲಿಂದ ಮನ್ನೂರು ಆಸ್ಪತ್ರೆಯಲ್ಲಿ ದಾಖಲಾದೆವು. ಮೂರು ಜನ ಮನ್ನೂರು ಆಸ್ಪತ್ರೆಯಲ್ಲಿ ದಾಖಲಿದ್ದೆವು. ನಾನು 8 ದಿನಗಳ ವರೆಗೆ ದಾಖಲಿದ್ದೆ. ಅಪಘಾತವು ಮೊಹಮ್ಮದ್ ಜಾವಿದ್ ಈತನ ಬೇಜವಾಬ್ದಾರಿತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ವಾದಿ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಮೊಹಮ್ಮದ್ ಜಾವಿದ್ ಈತನು ತಪ್ಪು ಹಾದಿಯಲ್ಲಿ ಕಾರು ಚಲಾಯಿಸಿ ಆತನೇ ಲಾರಿಗೆ ಡಿಕ್ಕಿ ಪಡಿಸಿದ್ದಾನೆ ಎಂದರೆ ಸರಿಯಲ್ಲ. ಆ ದಿನ ಮೊಹಮ್ಮದ್ ಜಾವಿದ್ ಮಧ್ಯಪಾನ ಸೇವಿಸಿ ಕಾರು ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ನಾನು AC electrician. ನಾನು AC electrician ಅಂತಾ ಬೇರೆಯವರ ಬಳಿ ಕೆಲಸ ಮಾಡುತ್ತಿದ್ದೇನೆ. ನನಗೆ ದಿನಾಲೂ ರೂ.400/- ಕೊಡುತ್ತಿದ್ದರು ಎಂದರೆ ಸರಿಯಲ್ಲ. ಸಂಬಳ ನಗದಾಗಿ ನೀಡುತ್ತಿದ್ದರು ಕೆಲವೊಮ್ಮೆ ಅವನ ಖಾತೆಗೆ ಹಾಕುತ್ತಿದ್ದರು. ನಾನು 10ನೇ ತರಗತಿ ಓದಿದ್ದೇನೆ. ನನ್ನ ಜನ್ಮ ದಿ.01-12-1999. ಅಪಘಾತವಾದಾಗ ನನ್ನ ವಯಸ್ಸು 25. ನಾನು ತಿಂಗಳಿಗೆ ರೂ. 30,000/- ಗಳಿಸುತ್ತಿದ್ದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಎಡ ಕೈ ಮತ್ತು ಎಡಗಾಲಿಗೆ ಆಪರೇಷನ್ ಆಗಿದೆ. ನನಗೆ ರೂ.3,50,000/- ಖರ್ಚು ಆಗಿದೆ

ಮತ್ತು ಮುಂದಿನ ಚಿಕಿತ್ಸೆಗಾಗಿ ರೂ.2,50,000/- ಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಗುಣ ಮುಖವಾಗಿ ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಚಾಲಕ ಕೆ ಎ 16 ಸಿ 5024 ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರಿ ಜೊತೆಗೆ ಮಿಲಾಪೆಯಾಗಿ ಪರಿಹಾರ ಪಡೆಯಲು ಸುಳ್ಳು ಪ್ರಕರಣ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಕೇಳಿದ ಪರಿಹಾರಕ್ಕೆ ಯಾವುದೇ ಆದಾರ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**